# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯವರ ಘನ ಅಧ್ಯಕ್ಷತೆಯಲ್ಲಿ ದಿ:19.02.2022 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀಮತಿ.ಸಂಗೀತಾ.ಆರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ.ಶಿವಕುಮಾರ್ | RI |
| 4. | ಶ್ರೀ.ಡೊಡ್ಡವಿರಪ್ಪ. | AE BWSSB |
| 5. | ಶ್ರೀ.ಕೆ.ಎಲ್.ಉಮೇಶ್ | ಕೆ.ಪ |
| 6. | ಶ್ರೀ.ಚಂದ್ರಶೇಖರ್ | TI |
| 7. | ಶ್ರೀ.ಕುಮಾರ್ | SWD |
| 8. | ಶ್ರೀ.ಡಾ||.ರಘು ರಾಮ್ | PHC |

ವಾರ್ಡಿನ ಕಾರ್ಯದರ್ಶಿಗಳು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. 1ನೇ ಮುಖ್ಯರಸ್ತೆ ಅನಂತನಗರದ 7ನೇ ಕ್ರಾಸ್ ನಿವಾಸಿಗಳು ದೂರವಾಣಿ ಮೂಲಕ ಕರೆ ಮಾಡಿ Pipeline ಅಳವಡಿಸಲು ತೆಗೆದಿದ್ದ Trunch ನ್ನು ಸರಿಯಾಗಿ ಮುಚ್ಚಿರುವುದಿಲ್ಲ, ಈಗ Concrete ಹಾಕಿ ಮುಚ್ಚಿ ಸರಿಮಾಡಿಕೊಡಲಾಗಿದೆ.
2. ಬಾಪೂಜಿನಗರದ 4ನೇ ಕ್ರಾಸ್ ನಲ್ಲಿ 1 ಮ್ಯಾನ ಹೊಲ್ ಒಡೆದಿದ್ದು, ಅದನ್ನು ಸರಿ ಪಡಿಸಿಕೊಡಬೇಕೆಂದು ಶ್ರೀ.ಯಶವಂತ್ ರಾವ್ ರವರು ಹಾಗೂ ಶ್ರೀ.ನಾರಾಯಣ್ ರಾವ್ ರವರು ದೂರವಾಣಿ ಮೂಲಕ ಮನವಿ ಮಾಡಿದ್ದ ದೂರನ್ನು ಪರಿಶೀಲಿಸಿ, ಶ್ರೀ. ಡೊಡ್ಡವೀರಪ್ಪ ರವರು ಹೊಸ Manhole ನ್ನು ನಿರ್ಮಾಣ ಮಾಡಿ ಸಮಸ್ಯೆ ಬಗೆ ಹರಿಸಲಾಗಿದೆ.
3. ಕಸದ ಆಟೋಗಳನ್ನು ಮೈದಾನದಲ್ಲಿ ನಿಲ್ಲಿಸಿ ಅಲ್ಲೇಯೇ ಸಾರ್ವಜನಿಕರು ಕಸ ಹಾಕಿ ಅಲ್ಲಿಯೇ ಕಸ ಶೇಖರವಾಗಿ ನೊಣಗಳು ಇತ್ಯಾದಿಗಳಿಂದ Hospital ಗೆ. ಬರುವ ಜನಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾವಗುತ್ತಿದ್ದು ಬೇರೆಡೇಗೆ ಸ್ಥಳಾಂತರಿಸುವಂತೆ ಸಾರ್ವಜನಿಕರು ಕೋರಿ ನೋಡಲ್ ಅಧಿಕಾರಿ ರವರಿಗೆ ದೂರವಾಣಿ ಮೂಲಕ ತಿಳಿಸಲಾಗಿತ್ತು. ಕಸದ ವಾಹನಗಳನ್ನು ತೆರವುಗೊಳಿಸಿ, ಮುಖ್ಯದ್ವಾರಕ್ಕೆ ಬೀಗ ಹಾಕಿ Hospital ನ ಸಿಬ್ಬಂದಿಯವರಿಗೆ, 1 ಬೀಗದ ಕೈನ್ನು ನೀಡಿ Ambulance ಮತ್ತು ಅವರ ವಾಹನಗಳನ್ನು ನಿಲ್ಲಿಸಲು ಅನುವು ಮಾಡಿಕೊಡಲಾಗಿದೆ.
4. ಈ ಪಾಕ್ಷಿಕದಲ್ಲಿ ರೂ: 10.35 ಲಕ್ಷಗಳಷ್ಟು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ತೆರಿಗೆ ಪರಿವೀಕ್ಷಕರು ಸಭೆಗೆ ತಿಳಿಸಿದರು.
5. ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತಿ ದಿನ ಕೋವಿಡ್ ಲಸಿಕೆಯನ್ನು 1st Dose, 2nd Dose ಹಾಗೂ Booster Dose, ಶಾಲೆಗಳಲ್ಲಿ ಸಹ ಲಸಿಕೆಯನ್ನು ನೀಡಲಾಗುತ್ತಿದೆಂದು ಡಾ||.ರಘು ರಾಮ್ ರವರು ಸಭೆಗೆ ತಿಳಿಸಿದರು.
6. Silt & Tractor ರವರು 15ನೇ ಕ್ರಾಸ್‌ನಲ್ಲಿ ಚರಂಡಿಯಲ್ಲಿ Silt ನ್ನು ತೆಗೆದಯುವ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ.
7. Culvert ಕಾಮಗಾರಿಗಳು ಪ್ರಗತಿಯಲ್ಲಿ ಇರುತ್ತದೆ.

8. ಸಾರ್ವಜನಿಕರಿಂದ ಕೆಳಕಂಡ ಸ್ಥಳಗಳಲ್ಲಿ, ವಿಧ್ಯುತ್ ದೀಪಗಳು ಬರುತ್ತಿಲ್ಲವೆಂದು ದೂರವಾಣಿ ಮೂಲಕ ಕಾರ್ಯ ನಿರೀಕ್ಷರಿಗೆ ತಿಳಿಸಿದರು Street Light Agency ಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ. 4ನೇ ಕ್ರಾಸ್ ಬಾಪೂಜಿನಗರ, ಅನಂತ ನಗರ 8ನೇ ಕ್ರಾಸ್, 7ನೇ ಕ್ರಾಸ್.
9. ಬಾಪೂಜಿನಗರ 5ನೇ ಮುಖರಸ್ತೆಯಲ್ಲಿ ನೀರಿನ ಸಮಸ್ಯೆ ಇದ್ದು ಸಾರ್ವಜನಿಕರು ದೂರು ನೀಡಿದ್ದು ಸಮಸ್ಯೆಯನ್ನು ಬಗೆ ಹರಿಸಿಕೊಡುವುದಾಗಿ AE BWSSB ಶ್ರೀ.ದೊಡ್ಡವೀರಪ್ಪ ರವರು ಸಭೆಗೆ ತಿಳಿಸಿದರು.

ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ–ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 19.02.2022.

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134